

# ಟ್ರೈಬಲ್ ಜಾಕೆಟ್ ಟ್ರೆಂಡ್

ಟ್ರೈಬಲ್ ಜಾಕೆಟ್ ಹೊಸದಾಗಿ ಫ್ಯಾಷನ್ ಜಗತ್ತಿಗೆ ಎಂಟ್ರಿ ಕೊಟ್ಟಿದೆ. ಇದನ್ನು ಮಹಿಳೆ–ಪುರುಷರಿಬ್ಬರೂ ಬಳಸಬಹುದು. ಸಾಂಪ್ರದಾಯಿಕ– ಪಾಶ್ಚಾತ್ಯ ಎರಡೂ ಮಾದರಿಯ ಉಡುಪುಗಳಿಗೆ ಮ್ಯಾಚ್ ಆಗುವ ಟ್ರೈಬಲ್ ಜಾಕೆಟ್ ಫ್ಯಾಷನ್ ಟ್ರೆಂಡ್ ಆಗಿದೆ.

■ **ಆಶಾ ಎಸ್. ಕುಲಕರ್ಣಿ**

ದಿನದಿಂದ ದಿನಕ್ಕೆ ಬದಲಾಗುತ್ತಿರುವ ಫ್ಯಾಷನ್ ಲೋಕದಲ್ಲಿ ಮಹಿಳೆಯರ ಫ್ಯಾಷನ್, ಪುರುಷರ ಫ್ಯಾಷನ್ ಎಂಬ ಭೇದಭಾವವಿಲ್ಲ. ಅಂಥಹದರಲ್ಲಿ ಮಹಿಳೆಯರು ಪುರುಷರು ಎಲ್ಲರೂ ಕಾಮನ್ ಆಗಿ ಧರಿಸುವ ಜಾಕೆಟ್‌ಗಳು ಇದೀಗ ಫ್ಯಾಷನ್ ಟ್ರೆಂಡ್ ಅನ್ನೇ ಸೃಷ್ಟಿಸಿವೆ.

ಹಿಂದೆಲ್ಲಾ ಬರೀ ಪುರುಷರಿಗೆ ಮಾತ್ರ ಸೀಮಿತವಾಗಿದ್ದ ಜಾಕೆಟ್‌ಗಳು ಇದೀಗ ಅಪ್‌ಡೇಟ್ ಆಗಿ ಅದಕ್ಕೆ ಫ್ಯಾಷನ್ ಟಚ್ ಕೊಡಲಾಗಿ ಅದನ್ನು ಮಹಿಳೆಯರೂ ಧರಿಸುತ್ತಿದ್ದಾರೆ. ಇದೀಗ ಈ ಜಾಕೆಟ್‌ಗಳು ಚಳಿಯಿಂದ ನಮ್ಮನ್ನು ರಕ್ಷಿಸುವ ಜಾಕೆಟ್‌ಗಳಾಗಿ ಉಳಿದಿಲ್ಲ, ಬದಲಾಗಿ ನಾಲ್ಕು ಜನರ ಮಧ್ಯೆ ನಮ್ಮನ್ನು ಫ್ಯಾಷನಬಲ್ ಆಗಿ ಕಾಣಿಸುವಂತೆ ಮಾಡುವ ಜಾಕೆಟ್‌ಗಳಾಗಿ ಪರಿವರ್ತನೆಗೊಂಡಿವೆ. ಈ ಜಾಕೆಟ್‌ಗಳು ಸಾಂಪ್ರದಾಯಿಕ ಉಡುಪುಗಳಿಗೂ ಸೈ, ಪಾಶ್ಚಾತ್ಯ ಉಡುಪುಗಳಿಗೆ ಸೈ ಎನ್ನುವಂತೆ ಎಲ್ಲದರ ಜೊತೆಗೂ ಇದನ್ನು ಮ್ಯಾಚ್ ಮಾಡಿ ಧರಿಸಬಹುದು.

ಮೊದಲೆಲ್ಲಾ ಜೀನ್ಸ್ ಬಟ್ಟೆಯಲ್ಲಿ ಮಾತ್ರ ದೊರೆಯುತ್ತಿದ್ದ ಜಾಕೆಟ್‌ಗಳು ಇದೀಗ ಲೆದರ್, ಡೆನಿಮ್, ವೆಲ್ವೆಟ್, ಫರ್, ಉಣ್ಣೆ... ಹೀಗೆ ಹಲವು ಮೆಟೀರಿಯಲ್‌ಗಳಿಂದ ತಯಾರಿಸಲಾಗುತ್ತಿದೆ. ಇವೆಲ್ಲವೂ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸುತ್ತಿವೆ. ಇದರ ಜೊತೆಗೆ ಟೋಲ್ಡ್ ಜಾಕೆಟ್‌ಗಳೂ ಕೂಡ ಇದೀಗ ಟ್ರೆಂಡಿಯಾಗಿವೆ. ಸಾಕಷ್ಟು